ಅಧ್ಯಾಯ 8 ಅಭ್ಯಾಸದ ಹಾಳೆ

# ನಿನ್ನ ನಿತ್ಯವಾದ ಅಂತಿಮಸ್ಥಿತಿ ಏನಾಗಿರುವುದು?

I. ಪಾಪವು ಏನಾಗಿದೆ?

____________________ ರೋಮಾಪುರ 14:23

____________________ 1 ಯೋಹಾನ 3:4

____________________ 1 ಯೋಹಾನ 5:17

____________________ ಯಾಕೋಬ 4:17

II. ನೀನು ಒಬ್ಬ ಪಾಪಿಯಾಗಿರುವಿಯೋ?

1. ಯಾಕಂದರೆ __________ ಪಾಪ ಮಾಡಿದ್ದಾರೆ. ರೋಮಾಪುರ 3:23
2. ನೀತಿವಂತನು __________ ಒಬ್ಬನಾದರೂ ಇಲ್ಲ. ರೋಮಾಪುರ 3:10
3. ನಮ್ಮಲ್ಲಿ ಪಾಪವಿಲ್ಲವೆಂದು ನಾವು ಹೇಳಿದರೆ, __________ __________ ಮತ್ತು __________ ನಮ್ಮಲ್ಲಿಲ್ಲ. 1 ಯೋಹಾನ 1:8


III. ಪಾಪಿಯ ಮತ್ತು ರಕ್ಷಿಸಲ್ಪಟ್ಟವನ ಅಂತಿಮ ಸ್ಥಿತಿ ಏನಾಗಿರುವುದು?

| ಪಾಪಿ | ರಕ್ಷಿಸಲ್ಪಟ್ಟವನು |
|---|---|
| __________ ಮತ್ತಾಯ 25:41 | __________ ಮತ್ತಾಯ 25:46 |
| __________ ಪ್ರಕಟನೆ 14:11 | __________ ಪ್ರಕಟನೆ 14:13 |
| __________ ಮತ್ತಾಯ 25:30 | __________ ಪ್ರಕಟನೆ 21:4 |
| __________ ರೋಮಾಪುರ 2:9 | __________ ಮತ್ತಾಯ 25:23 |
| __________ ಯೋಹಾನ 8:21 | __________ ಯೋಹಾನ 14:3 |
| __________ ಮತ್ತಾಯ 10:28 | __________ 1 ಪೇತ್ರ 1:3, 4 |

IV. ನಿಮ್ಮ ಅಂತಿಮ ಸ್ಥಿತಿಯು ನೀವು ಏನು ಮಾಡುವಿರಿ ಇಲ್ಲವೇ ಏನು ಮಾಡುವದಿಲ್ಲ ಎಂಬುದರ ಮೇಲೆ ತೀರ್ಮಾನಿಸಲ್ಪಡುವುದು?

| | |
|---|---|
| __________ ರೋಮಾಪುರ 2:8 | __________ ಮತ್ತಾಯ 7:21 |
| __________ 2 ಥೆಸಲೊನೀಕ 1:8 | __________ ಇಬ್ರಿಯ 5:9 |

Copyright 1965 - Gospel Light Pub. Co., Delight, AR 71940


ಪರಲೋಕ
ಕ್ಷಮಿಸಲ್ಪಟ್ಟವನು
ನೂತನ ಜೀವಿತ
ರಕ್ಷಿಸಲ್ಪಟ್ಟವನು
ಕ್ಷಮಿಸಲ್ಪಡದವನು
ಹಳೇ ಜೀವಿತ
ತಪ್ಪಿಹೋದದ್ದು
ನರಕ

**ಅಧ್ಯಯನ ಪ್ರಶ್ನಾವಳಿಯನ್ನು ಪ್ರಸ್ತುತ ಪಡಿಸುವುದು:**

8

# “ನಿನ್ನ ನಿತ್ಯವಾದ ಅಂತಿಮ ಸ್ಥಿತಿ ಏನಾಗಿರುವುದು?”

“ನಿನ್ನ ನಿತ್ಯವಾದ ಅಂತಿಮ ಸ್ಥಿತಿ ಏನಾಗಿರುವುದು” ಎಂಬ ಪಾಠವನ್ನು ಯಾವುದೇ ಅಧ್ಯಯನ ಪ್ರಶ್ನಾವಳಿಯ ನಂತರ ಉಪಯೋಗಿಸಬಹುದು. ಆದರೆ “ರಕ್ಷಣೆಯ” ಅಧ್ಯಯನ ಪ್ರಶ್ನಾವಳಿಯು ಪ್ರಸ್ತುತ ಪಡಿಸಿದ ನಂತರದ ವರೆಗೆ ಇದನ್ನು ಪ್ರಸ್ತುತ ಪಡಿಸಬಾರದು, ಸುವಾರ್ತೆಗೆ ವಿಧೇಯನಾಗಲು ವಿದ್ಯಾರ್ಥಿಯನ್ನು ನಡಿಸಲು ಪ್ರಯತ್ನಿಸುವಾಗ ಶಿಕ್ಷಕನು ಈ ಪ್ರಶ್ನಾವಳಿಯನ್ನು ಉಪಯೋಗಿಸಲು ಬಯಸಬಹುದು.

**ಉದ್ದೇಶ**

“ಅಂತಿಮಸ್ಥಿತಿ” ಎಂಬ ಪ್ರಶ್ನಾವಳಿಯ ಉದ್ದೇಶವು ವಿಧೇಯತೆಯ ಮತ್ತು ಅವಿಧೇಯತೆಯ ಪರಿಣಾಮಗಳನ್ನು ತೋರಿಸುವುದು, ಕಲಿಯುವವನಿಗೆ ಯೇಸುವಿಗೆ ಅವನ ಉತ್ತರವು ಅವನ ನಿತ್ಯವಾದ ಅಂತಿಮಸ್ಥಿತಿಗೆ ಹೇಗೆ ಪರಿಣಾಮ ಮಾಡುವುದು ಎಂಬುದನ್ನು ಅರಿತುಕೊಳ್ಳಲು ಸಹಾಯ ಮಾಡುವುದು ಆಗಿರುತ್ತದೆ.

**ಸಂಕ್ಷಿಪ್ತದಲ್ಲಿ ಪಾಠ**

ಈ ಪಾಠವು ಪಾಪವು ಏನಾಗಿದೆ ಮತ್ತು ನಾವೆಲ್ಲರೂ ಪಾಪ ಮಾಡಿದ್ದೇವೆ ಎಂಬುದನ್ನು ತೋರಿಸುತ್ತದೆ. ಕ್ಷಮಿಸಲ್ಪಡದ ಪಾಪಿಯ ಅಂತಿಮ ಸ್ಥಿತಿಯು ಕ್ಷಮಿಸಲ್ಪಟ್ಟ, ರಕ್ಷಿಸಲ್ಪಟ್ಟ, ಪಾಪಿಯ ಅಂತಿಮ ಸ್ಥಿತಿಗೆ ವಿರುದ್ಧವಾಗಿ ಹೇಳಲ್ಪಟ್ಟಿದೆ. ನಾವು ಶಿಕ್ಷಿಸಲ್ಪಡಲಿ, ಶಿಕ್ಷಿಸಲ್ಪಡದೇ ಇರಲಿ. ಬಹುಮಾನಿಸಲ್ಪಡಲಿ, ಬಹುಮಾನಿಸಲ್ಪಡದೇ ಇರಲಿ, ಅದು, ಸುವಾರ್ತೆಗೆ ವಿಧೇಯರಾಗುವೆವೋ ಇಲ್ಲವೋ ಎಂಬುದರ ಮೇಲೆ ಅವಲಂಭಿಸಿರುತ್ತದೆ.

**ಪೀಠಿಕೆ**

ಹಿಂದಿನ ಪಾಠಗಳಲ್ಲಿ ಪಾಪದ ಮತ್ತು ಮರಣದ ಮೂಲ, ಪಾಪದಿಂದ ಮನುಷ್ಯನನ್ನು ರಕ್ಷಿಸುವ ದೇವರ ಯೋಜನೆ, ಮತ್ತು ಯೇಸುವು ರಕ್ಷಣೆಯ ಮಾರ್ಗ ಎಂಬುದನ್ನು ಅಧ್ಯಯನ ಮಾಡಿದ್ದೇವೆ, ಯೇಸುವಿಗೆ ವಿಧೇಯರಾಗುವದನ್ನು ನಾವು ಆಯ್ಕೆ ಮಾಡಿಕೊಳ್ಳದಿದ್ದರೆ ನಮ್ಮ ಅಂತ್ಯಸ್ಥಿತಿಯು ಏನಾಗುವುದು? [ಓದಿರಿ ಅಪೊಸ್ತಲರ ಕೃತ್ಯಗಳು 3:23.] ಯೇಸುವಿನ ಚಿತ್ತವನ್ನು ಸ್ವೀಕರಿಸುವುದು ನಮಗೆ

ಅತಿ ಮಹತ್ವದ ವಿಷಯವಾಗಿದೆ. ನಮ್ಮ ನಿತ್ಯವಾದ ಅಂತಿಮ ಸ್ಥಿತಿಯು ಅದರ ಮೇಲೆ ಅವಲಂಭಿಸಿರುತ್ತದೆ, ಪಾಪವು ನಮ್ಮ ಅಂತಿಮ ಸ್ಥಿತಿಯ ಮೇಲೆ ಪರಿಣಾಮ ಮಾಡುತ್ತದೆ. ನಾವೆಂದೂ ಪಾಪ ಮಾಡಿರದಿದ್ದರೆ, ಶಿಕ್ಷಿಸಲ್ಪಡುವದರ ಬಗ್ಗೆ ನಾವೆಂದೂ ಚಿಂತಿಸ ಬೇಕಾಗಿರುವದಿಲ್ಲ.

## I. ಪಾಪವು ಏನಾಗಿರುತ್ತದೆ?

ನಮ್ಮಲ್ಲಿ ಅನೇಕರು ನಾವು ಎಷ್ಟುಸಲ ಪಾಪ ಮಾಡುತ್ತೇವೆ ಎಂಬುದನ್ನು ತಿಳಿದು ಕೊಳ್ಳುವದಿಲ್ಲ ಯಾಕಂದರೆ ಪಾಪವು ಏನಾಗಿದೆ ಎಂಬುದನ್ನು ನಾವು ಅರ್ಥಮಾಡಿ ಕೊಳ್ಳುವದಿಲ್ಲ. ಹೊಸ ಒಡಂಬಡಿಕೆಯಲ್ಲಿ "ಪಾಪ" ಎಂಬ ಪದವು ಗ್ರೀಕ ಪದ *hamartia* ಎಂಬುದರಿಂದ ಬರುತ್ತದೆ. ಅದರ ಅರ್ಥ "ಗುರಿಯನ್ನು ತಪ್ಪಿಸಿಕೊ, ಕರ್ತವ್ಯದಲ್ಲಿ ಬಿದ್ದುಹೋಗು" ಎಂದಾಗುತ್ತದೆ. ಬೈಬಲಿನಲ್ಲಿ ಪಾಪವು ಅನೇಕಸಲ ಕಂಡುಬರುತ್ತದೆ ಯಾಕಂದರೆ ಪಾಪವು ಮಾನವ ಚರಿತ್ರೆಯಲ್ಲಿ ಪ್ರಮುಖವಾದದ್ದಾಗಿದೆ.

ನಾವು ಜೀವಿಸಬೇಕಾದ ಮಟ್ಟದಂತೆ, ದೇವರು ತನ್ನನ್ನು, ತನ್ನ ಸ್ವಂತ ಸ್ವಭಾವವನ್ನು ಕೊಟ್ಟಿದ್ದಾನೆ [1 ಪೇತ್ರ 1:14-16]. ದೇವರು ತನ್ನ ಹೋಲಿಕೆಯಲ್ಲಿ ನಮ್ಮನ್ನು ಸೃಷ್ಟಿಸಿದನು [ಆದಿಕಾಂಡ 1:26, 27]. ನಾವು ಪಾಪಮಾಡುವಾಗ, ದೇವರು ನಮಗೆ ಕೊಟ್ಟ ಸ್ವಭಾವವನ್ನು ಅತಿಕ್ರಮಿಸುತ್ತೇವೆ. ನಮಗಾಗಿ ಇರುವ ದೇವರ ಸಂಕಲ್ಪವನ್ನು ನೆರ ವೇರಿಸುವಲ್ಲಿ ಸೋತು ಹೋಗುತ್ತೇವೆ. ನಾವು ಪಾಪಮಾಡುವಾಗ, ದೇವರು ನಮಗೆ ಕೊಟ್ಟ ಸ್ವಭಾವವನ್ನು ಕೆಡಿಸುತ್ತೇವೆ.

ಪಾಪವು ಏನಾಗಿದೆ ಎಂಬುದನ್ನು ಕುರಿತು ಬೈಬಲ್ ನಾಲ್ಕು ಹೇಳಿಕೆಗಳನ್ನು ಕೊಡುತ್ತದೆ. ಪಾಪವು ಏನಾಗಿದೆ ಎಂಬುದನ್ನು ತಿಳಿಯಲು ನಮಗೆ ಸಹಾಯಮಾಡುವ, ನಾವು ಯೋಚಿಸುವ ಮೊದಲನೆಯ ಹೇಳಿಕೆಯು ಪೌಲನಿಂದ ಬರೆಯಲ್ಪಟ್ಟಿತು. ಪಾಪವು ಏನಾಗಿದೆಯೆಂದು ಪೌಲನು ಹೇಳುತ್ತಾನೆ. [ಓದಿರಿ ರೋಮಾಪುರ 14:23.] ಪಾಪವು *ಏನಾಗಿದೆ?* [ಖಾಲಿಯಾದ ಸ್ಥಳದಲ್ಲಿ "ಯಾವುದು ನಂಬಿಕೆಯದಾಗಿರುವದಿಲ್ಲವೋ ಅದು" ಎಂದು ತುಂಬಿರಿ.] ಪಾಪವು ಸರಿಯಾದದ್ದಾಗಿದೆ ಎಂಬ ಭರವಸೆ ನಮಗೆ ಇರುವ ಸಂಗತಿಯನ್ನು ಮಾಡುವುದಾಗಿದೆ. ದೇವರ ವಾಕ್ಯವು ಹೇಳುವದನ್ನು ನಾವು ಮಾಡುವಾಗ, ನಾವು ಮಾಡುತ್ತಿರುವುದು ಸರಿಯಾಗಿದೆ ಎಂಬ ನಂಬಿಕೆಯೊಂದಿಗೆ ನಾವು ಕಾರ್ಯಮಾಡಬಹುದು, ಯಾಕಂದರೆ ದೇವರ ಸಂದೇಶವನ್ನು ದೇವರ ವಾಕ್ಯವನ್ನು ಕೇಳುವದರಿಂದ ನಂಬಿಕೆಯು ಬರುವುದು [ರೋಮಾಪುರ 10:17]. ದೇವರ ವಾಕ್ಯವು ಏನು ಹೇಳುತ್ತದೆ ಎಂಬುದನ್ನು ನಾವು ತಿಳಿದುಕೊಂಡರೆ ನಾವು ಸರಿಯಾದದ್ದನ್ನು ಮಾಡುತ್ತೇವೋ ಇಲ್ಲವೋ ಎಂಬುದರ ಬಗ್ಗೆ ಸಂಶಯ ಪಡದೇ ಕಾರ್ಯಮಾಡಬಹುದು. ಹೀಗಿದ್ದರೂ, ಕೆಲವು ವಿಷಯಗಳಲ್ಲಿ ಯಾವುದು ಸರಿ ಮತ್ತು ಯಾವುದು ತಪ್ಪು ಎಂಬುದರ ಬಗ್ಗೆ ನಿಶ್ಚಿತತೆ ಉಳ್ಳವರಾಗಿರುವದಿಲ್ಲ, ಯಾಕಂದರೆ ದೇವರು ಏನು ಹೇಳಿದ್ದಾನೆ ಎಂಬುದರ ಬಗ್ಗೆ ನಾವು ಅರ್ಥಮಾಡಿಕೊಳ್ಳುವದಿಲ್ಲ. ಯಾವುದಾದರೂ ತಪ್ಪಾಗಿದೆ ಎಂದು ನಾವು ನಂಬುವಾಗ, ಇಲ್ಲವೇ ಅದನ್ನು ಮಾಡುವುದು ಸರಿಯಾಗಿದೆ ಎಂಬುದರ ಬಗ್ಗೆ ಸಂಶಯ ಬರುವಾಗ, ಆದರೆ ಹೇಗಿದ್ದರೂ ಅದನ್ನು ಮಾಡಿದರೆ, ನಾವು ಪಾಪಮಾಡುತ್ತೇವೆ. ಯಾವುದು ನಂಬಿಕೆಯದಾಗಿರುವದಿಲ್ಲವೋ ಅದು ಪಾಪ ವಾಗಿರುತ್ತದೆ. ತಾನು ಮಾಡಬೇಕೋ ಮಾಡಬಾರದೋ ಎಂದು ಸಂಶಯಪಡುತ್ತ ಕಾರ್ಯಮಾಡುವವನು ಪಾಪಮಾಡುವವನಾಗಿದ್ದಾನೆ.

ನಾವು ಯೋಚಿಸುವ ಎರಡನೆಯ ಹೇಳಿಕೆಯು ಅಪೊಸ್ತಲ ಯೋಹಾನನಿಂದ

ಬರೆಯಲ್ಪಟ್ಟಿದೆ. ಪಾಪವು ಏನಾಗಿದೆಯೆಂದು ಯೋಹಾನನು ಹೇಳಿದನು? [ಓದಿರಿ 1 ಯೋಹಾನ 3:4.] ಪಾಪವು *ಏನಾಗಿದೆ?* [ಖಾಲಿಯಾದ ಸ್ಥಳದಲ್ಲಿ "ಕಟ್ಟಳೆಯನ್ನು ಮೀರುವುದು" (ಅಧರ್ಮವು) ಎಂದು ತುಂಬಿರಿ.] "ಅಧರ್ಮವು" ಅಂದರೆ "ನಿಯಮದಿಂದ ಇಡಲ್ಪಟ್ಟ ಮಿತಿಗಳನ್ನು ಮೀರಿ ಹೋಗುವುದು, ನಿಬಂಧನೆಯ ಅಪ್ಪಣೆಯಿಲ್ಲದೆ ವರ್ತಿಸುವುದು." ಹಳೆ ಒಡಂಬಡಿಕೆಯಲ್ಲಿ ಕಂಡು ಬಂದ ಧರ್ಮಶಾಸ್ತ್ರದ ಬಗ್ಗೆ ಯೋಹಾನನು ಬರೆಯುತ್ತಿರುವದಿಲ್ಲ ಯಾಕಂದರೆ ಕ್ರೈಸ್ತನು ಆ ನಿಯಮದ ಅಧೀನತೆಯಲ್ಲಿ ಇರುವದಿಲ್ಲ (ಗಲಾತ್ಯ 3:24, 25). ಯೋಹಾನನು "ಕ್ರಿಸ್ತನ ನಿಯಮದ" ಬಗ್ಗೆ ಬರೆಯುತ್ತಿದ್ದಿರಬೇಕು (1 ಕೊರಿಂಥ 9:21), ಅವು ಯೇಸುವಿನಿಂದ ಬೋಧಿಸಲ್ಪಟ್ಟ ತಪ್ಪುಗಳು. ಯೇಸುವಿನ ಬೋಧನೆಯಿಂದ ಜೀವಿಸುವ ತನ್ನ ಮಾರ್ಗವನ್ನು ನಿರ್ಬಂಧಿಸಿಕೊಳ್ಳದ ವ್ಯಕ್ತಿಯು ಪಾಪಮಾಡುವವನು ಮತ್ತು ಈ ಕಾರಣದಿಂದ ದೇವರ ದೃಷ್ಟಿಯಲ್ಲಿ ಪಾಪಿಯೆಂದು ನ್ಯಾಯ ತೀರ್ಪುಹೊಂದುವವನು. ಕಟ್ಟಳೆಯನ್ನು ಮೀರುವುದು ಪಾಪವಾಗಿದೆ.

ನಾವು ಯೋಚಿಸಬೇಕಾದ ಮೂರನೆಯ ಹೇಳಿಕೆಯೂ ಸಹ ಯೋಹಾನನಿಂದ ಬರೆಯಲ್ಪಟ್ಟಿದೆ. ಪಾಪವು ಏನಾಗಿರುವುದೆಂದು ಯೇಸು ಹೇಳಿರುತ್ತಾನೆ? [ಓದಿರಿ 1 ಯೋಹಾನ 5:17.] ಪಾಪವು *ಏನಾಗಿದೆ?* [ಖಾಲಿಯಾದ ಸ್ಥಳದಲ್ಲಿ "ನೀತಿಗೆ ವಿರುದ್ಧವಾದ ಎಲ್ಲವೂ" ಎಂದು ತುಂಬಿರಿ.] *ಕೆಲವು* ಅನೀತಿಯ ಕೃತ್ಯಗಳನ್ನು ಪಾಪದಂತೆ ಬಹಳ ಸಲ ಯೋಚಿಸುತ್ತೇವೆ, ಆದರೆ *ಇತರವುಗಳು* ಬಹಳ ಗಂಭೀರವಾದವುಗಳಾಗಿಲ್ಲ, ಎಂದು ನಂಬಿ, ಪಾಪವೆಂದು ಯೋಚಿಸುವದಿಲ್ಲ. ಗಂಭೀರವಾದವುಗಳೆಂದು ತೋರಿದರೂ ತೋರದಿದ್ದರೂ ಇಲ್ಲವೇ ಒಂದು ಅನೀತಿಯ ಕಾರ್ಯದ ಗಂಭೀರತೆಯ ಕೊರತೆಯಿದ್ದರೂ ಅದು ದೇವರ ದೃಷ್ಟಿಯಲ್ಲಿ ಇನ್ನೂ ಪಾಪವೇ ಆಗಿದೆ. ಎಲ್ಲಾ ಅನೀತಿಯು ಪಾಪವಾಗಿದೆ. ನಾವು ಓದುವ ನಾಲ್ಕನೆಯ ಹೇಳಿಕೆಯು ಯಾಕೋಬನಿಂದ ಬರೆಯಲ್ಪಟ್ಟಿದೆ. ಪಾಪವು ಏನಾಗಿದೆಯೆಂದು ಯಾಕೋಬನು ಹೇಳುತ್ತಾನೆ? [ಓದಿರಿ ಯಾಕೋಬ 4:17.] ಪಾಪವು *ಏನಾಗಿದೆ?* [ಖಾಲಿಯಾದ ಸ್ಥಳದಲ್ಲಿ "ಒಳ್ಳೇದನ್ನು ಮಾಡಬೇಕೆಂದು ತಿಳಿದು ಅದನ್ನು ಮಾಡದೇ ಇರುವುದು" ಎಂದು ತುಂಬಿರಿ.]

ಪಾಪವನ್ನು ಕುರಿತ ಮೊದಲಿನ ಮೂರು ಹೇಳಿಕೆಗಳು ತಪ್ಪಾಗಿ ವರ್ತಿಸುವುದು ಪಾಪವಾಗಿದೆಯೆಂದು ಪ್ರಕಟಿಸಿದವು. ಅವು ತಪ್ಪಾಗಿರುವ ಕಾರ್ಯಗಳಲ್ಲಿ ತೊಡಗಿರುವದರೊಂದಿಗೆ ವ್ಯವಹರಿಸುವದರಿಂದ ಅವು ತಪ್ಪಾದವುಗಳಾಗಿರುತ್ತವೆ ಯಾಕಂದರೆ ನಾವು ನಮ್ಮ ಸ್ವಂತ ಮಟ್ಟಗಳನ್ನು ಉಲ್ಲಂಘಿಸುತ್ತಿರುತ್ತೇವೆ. ಇಲ್ಲವೇ ದೇವರ ಮಟ್ಟಗಳನ್ನು ಉಲ್ಲಂಘಿಸುತ್ತಿರುತ್ತೇವೆ. ಇದಲ್ಲದೇ, ನಾವು ಒಳ್ಳೇದನ್ನು ಮಾಡಬೇಕೆಂದು ತಿಳಿದಿರುವದನ್ನು ಮಾಡುವಲ್ಲಿ ಸೋತು ಹೋಗುವುದು ಪಾಪ ಎಂದು ಯಾಕೋಬನು ಹೇಳಿದ್ದಾನೆ. ಅಗತ್ಯತೆಯಲ್ಲಿರುವ ಮನುಷ್ಯನಿಗೆ ಸಹಾಯಮಾಡಲು, ದೇವರ ಚಿತ್ತವನ್ನು ಯಾರಿಗಾದರೂ ಬೋಧಿಸಲು, ಸಾಹಾಯಕ ಮಾತನ್ನು ಹೇಳಲು, ಇತ್ಯಾದಿ, ನಾವು ತಿಳಿದಿದ್ದರೆ, ಮತ್ತು ಅದನ್ನು ಮಾಡದಿದ್ದರೆ, ನಾವು ಪಾಪಮಾಡುವವರಾಗಿದ್ದೇವೆ ಒಳ್ಳೇಯದನ್ನು ಮಾಡುವದನ್ನು ತಿಳಿದುಕೊಂಡು, ನಾವು ಮಾಡಬೇಕೆಂದು ತಿಳಿದಿರುವ ಒಳ್ಳೇಯದನ್ನು ಮಾಡದೇ ಇರುವುದು ಪಾಪವಾಗಿದೆ.

ಈ ಭಾಗದಲ್ಲಿ ನಾವು ಏನನ್ನು ಕಲಿತುಕೊಂಡಿದ್ದೇವೆ? ಸರಿಯಾದದ್ದರ ಬಗ್ಗೆ ಸಂಶಯವಿರುವದನ್ನು ಮಾಡುವುದು, ಧರ್ಮ ಶಾಸ್ತ್ರದ ಒಪ್ಪಿಗೆಯಿಲ್ಲದಿರುವದನ್ನು ಮಾಡುವುದು, ಯಾವುದೇ ಅನೀತಿಯ ಕಾರ್ಯಮಾಡುವುದು, ನಾವು ಮಾಡಬೇಕೆಂದು ತಿಳಿದಿರುವ ಒಳ್ಳೇ ಕಾರ್ಯವನ್ನು ಮಾಡದೇ ಹೋಗುವುದು, ಆಗ ನಾವು ಪಾಪಮಾಡುತ್ತೇವೆಂದು ಕಲಿತು ಕೊಂಡಿದ್ದೇವೆ.

## II. ನೀನು ಪಾಪಿಯಾಗಿದ್ದೀಯೋ?

ಪಾಪದ ಬಗ್ಗೆ ನಾವು ಕಲಿತುಕೊಂಡದ್ದರ ಮೇಲೆ ಅವಲಂಭಿಸಿ, ನಿನ್ನನ್ನು ನೀನು ಹೇಗೆ ನಿರ್ಣಯಿಸಿಕೊಳ್ಳುವಿ? ನೀನು ಸರಿ ಎಂದು ತಿಳಿದಿರುವ ಸಂಗತಿಗಳನ್ನು *ಯಾವಾಗಲೂ* ಮಾಡಿರುವಿಯೋ ಮತ್ತು ನೀನು ಸಂಶಯಪಟ್ಟು ಎಲ್ಲಾ ಸಂಗತಿಗಳನ್ನು *ಯಾವಾಗಲೂ* ಮಾಡದೇ ಇರುವಿಯೋ? ಯೇಸುವು ಬೋಧಿಸಿದ ತತ್ವಗಳಲ್ಲಿ, ಕ್ರಿಸ್ತನ ನಿಯಮಗಳಲ್ಲಿ ಇದ್ದು *ಯಾವಾಗಲೂ* ಮುಂದುವರಿದಿದ್ದೀಯೋ? ಪ್ರತಿಯೊಂದು ಅನೀತಿಯ ಕಾರ್ಯಗಳನ್ನು ಮಾಡದಂತೆ ಯಾವಾಗಲೂ ಉಳಿದುಕೊಂಡಿರುವಿಯೋ? ನೀನು ಮಾಡಬೇಕೆಂದು ತಿಳಿದಿರುವ ಒಳ್ಳೇ ಕಾರ್ಯಗಳನ್ನು *ಯಾವಾಗಲೂ* ಮಾಡುತ್ತಿರುವಿಯೋ? ಅವೆಲ್ಲವುಗಳಿಗೆ ನೀನು "ಹೌದು" ಎಂದು ಹೇಳಬಹುದಾದರೆ, ನೀನು ಎಂದೂ ಪಾಪ ಮಾಡಿರುವದಿಲ್ಲ, ಇವೆಲ್ಲವುಗಳಿಗೆ "ಹೌದು," ಎಂದು ಸತ್ಯವಾಗಿ ಹೇಳಬಲ್ಲ ಯಾರನ್ನಾದರೂ ನೀನು ತಿಳಿದಿರುವಿಯೋ?

1. ಎಷ್ಟು ಜನರು ಪಾಪಿಗಳಾಗಿದ್ದಾರೆ? [ಓದಿರಿ ರೋಮಾಪುರ 3:23.] ಎಷ್ಟು *ಜನರು* ಪಾಪಿಗಳಾಗಿದ್ದಾರೆ? [ಖಾಲಿಯಾದ ಸ್ಥಳದಲ್ಲಿ "ಎಲ್ಲರೂ" ಎಂದು ತುಂಬಿರಿ.] ನಾವು ಪಾಪಮಾಡುವಾಗ ದೇವರ ಮಹಿಮೆಯನ್ನು ಕಂಡುಕೊಳ್ಳದೇ ಹೋಗುತ್ತೇವೆ ಅಂದರೆ ಆತನ ಪರಿಶುದ್ಧ ಸ್ವಭಾವವನ್ನು ಹೊಂದಿಕೊಳ್ಳದೇ ಹೋಗುತ್ತೇವೆ. ನಾವು ಜೀವಿಸಲಿಕ್ಕೆ ಒಂದು ಮಟ್ಟದಂತೆ ದೇವರು ತನ್ನನ್ನು ನಮಗಾಗಿ ಕೊಟ್ಟಿದ್ದಾನೆಂಬುದನ್ನು ಜ್ಞಾಪಿಸಿಕೊಳ್ಳಿರಿ. ದೇವರು ಸುಳ್ಳು ಹೇಳುವದಿಲ್ಲ, ಹೀಗಿರುವದರಿಂದ ನಾವು ಸುಳ್ಳು ಹೇಳಬಾರದು. ದೇವರು ಕದಿಯುವದಿಲ್ಲ ಆದುದರಿಂದ ನಾವು ಕದಿಯಬಾರದು ದೇವರು ತನ್ನ ಕಡೆಗೆ ಒಳ್ಳೇಯವರಾಗಿರದೇ ಇರುವವರಿಗೆ ಒಳ್ಳೇಯವನಾಗಿರುತ್ತಾನೆ, ಆದುದರಿಂದ ನಮ್ಮನ್ನು ಕೆಟ್ಟದ್ದಾಗಿ ನಡಿಸುಕೊಳ್ಳುವವರಿಗೆ ನಾವು ಒಳ್ಳೆಯವರಾಗಿರಬೇಕು (ಮತ್ತಾಯ 5:44-48.) ದೇವರ ಗುಣಲಕ್ಷಣವನ್ನು ನಾವು ಅನುಕರಿಸಬೇಕು, ಇದನ್ನು ಮಾಡದೇ ಹೋಗುವಾಗ, ನಾವು ಪಾಪಮಾಡುತ್ತೇವೆ. ಎಲ್ಲರೂ ತಮ್ಮ ಪರಿಶುದ್ಧ ಸೃಷ್ಟಿಕರ್ತನ ಪರಿಶುದ್ಧ ಸ್ವಭಾವವನ್ನು ಹೊಂದಿಕೊಳ್ಳುವಲ್ಲಿ ಸೋತು ಹೋಗಿದ್ದಾರೆ.

2. ಎಲ್ಲರೂ ಪಾಪಿಗಳಾಗಿದ್ದರೆ, ಯಾರಾದರೂ ನೀತಿವಂತರಿರುವರೋ? [ಓದಿರಿ ರೋಮಾಪುರ 3:10.] *ಎಷ್ಟು ಜನರು* ನೀತಿವಂತರಿದ್ದಾರೆ? [ಖಾಲಿ ಸ್ಥಳದಲ್ಲಿ "ಯಾರೂ ಇಲ್ಲ" ಎಂದು ತುಂಬಿರಿ.] ದೇವರು ಮಾತ್ರವೇ ನೀತಿವಂತನು, ನಮ್ಮಲ್ಲಿ ಯಾರೂ ನೀತಿವಂತರಿಲ್ಲ.

3. ನಾವು ನೀತಿವಂತರು, ಮತ್ತು ನಾವೆಂದೂ ಪಾಪಮಾಡಿಲ್ಲವೆಂದು ಹೇಳಿದರೆ, ದೇವರು ನಮ್ಮ ಬಗ್ಗೆ ಏನು ಹೇಳುವನು? [ಓದಿರಿ 1 ಯೋಹಾನ 1:8.] ನಮ್ಮ ಬಗ್ಗೆ *ಏನು* ಹೇಳಲ್ಪಟ್ಟಿದೆ? [ಖಾಲಿಯಾದ ಸ್ಥಳದಲ್ಲಿ "ನಮ್ಮನ್ನು ನಾವೇ ಮೋಸ ಪಡಿಸಿಕೊಳ್ಳುತ್ತೇವೆ" ಮತ್ತು "ಸತ್ಯ" ಎಂದು ತುಂಬಿರಿ.] ನಮ್ಮಲ್ಲಿ ಪಾಪವಿಲ್ಲವೆಂದು ನಾವು ಹೇಳಿದರೆ, ನಾವು ನಮ್ಮೊಂದಿಗೆ ಪ್ರಾಮಾಣಿಕರಾಗಿರುವದಿಲ್ಲ. ನಾವೆಲ್ಲರೂ ಪಾಪಮಾಡಿದ್ದೇವೆ. ನಾವು ಪಾಪಮಾಡಿದ್ದೇವೆ ಎಂದು ದೇವರು ಸ್ಪಷ್ಟವಾಗಿ ಹೇಳುತ್ತಾನೆ (ರೋಮಾಪುರ 3:23). ತಾನು ಪಾಪಮಾಡಿಲ್ಲ ಎಂದು ಹೇಳುವವನು ದೇವರನ್ನು ಸುಳ್ಳುಗಾರನೆಂದು ಕರೆಯುತ್ತಾನೆ (1 ಯೋಹಾನ 1:10) ಮತ್ತು ತಾನು ಒಬ್ಬ ಪಾಪಿಯಾಗಿರುವ ತನ್ನ ಪರಿಸ್ಥಿತಿಯನ್ನು ಯಾವುದೇ ರೀತಿಯಲ್ಲಿ ಬದಲಾಯಿಸುವದಿಲ್ಲ, ಆದರೆ ತನ್ನನ್ನು ಮೋಸಗೊಳಿಸಿಕೊಳ್ಳುತ್ತಾನೆ, ಅವನು ಸತ್ಯಕ್ಕೆ ಎದುರಿಸುತ್ತಿರುವದಿಲ್ಲ, ಆದುದರಿಂದ ಅವನಲ್ಲಿ ಯಾವ ಸತ್ಯವೂ ಇರುವದಿಲ್ಲ.

ನೀನು ಪಾಪಮಾಡಿರುವದಿಲ್ಲ ಎಂದು ಹೇಳಲಿಕ್ಕೆ ಬಯಸುವದಿಲ್ಲ, ಅಲ್ಲವೇ?

ಪಾಪದ ಬಗ್ಗೆ ದೇವರಿಟ್ಟುಕೊಂಡ ಮಟ್ಟವನ್ನು ನಾನು ಯೋಚಿಸುವಾಗ, ನಾನು ಪಾಪಿಯಾಗಿದ್ದೇನೆ ಎಂಬ ಸಂಗತಿಯನ್ನು ಎದುರಿಸಬೇಕು. ನೀನು ಪಾಪಮಾಡಿದ್ದೀ ಎಂದು ಒಪ್ಪಿಕೊಳ್ಳುವಿಯೋ?

ಈ ಭಾಗದಲ್ಲಿ ನಾವು ಏನನ್ನು ಕಲಿತುಕೊಂಡಿದ್ದೇವೆ? ನಾವು ಎಲ್ಲರೂ ಪಾಪಿಗಳಾಗಿದ್ದೇವೆ ಎಂಬುದನ್ನು ಕಲಿತುಕೊಂಡಿದ್ದೇವೆ. ದೇವರ ಮಟ್ಟಗಳನ್ನು ನಾವೆಲ್ಲರೂ ಮೀರಿಹೋಗಿದ್ದೇವೆ ಮತ್ತು ನಾವು ಮಾಡುವ ಎಲ್ಲದರಲ್ಲಿ ಆತನಂತೆ ಇರುವದರಲ್ಲಿ ಸೋತುಹೋಗಿದ್ದೇವೆ.

## III. ನಿನ್ನ ಅಂತಿಮ ಸ್ಥಿತಿ

ಎಲ್ಲರೂ ಪಾಪಮಾಡಿರುವುದು ಒಂದು *ಸತ್ಯಾಂಶವಾಗಿದೆ.* ಪಾಪಿಗಳಲ್ಲದವರು ಯಾರೂ ಇಲ್ಲ. ನಾವು ಕ್ಷಮಿಸಲ್ಪಡದ ಪಾಪಿಗಳಾಗಿದ್ದೇವೆ ಇಲ್ಲವೇ ಕ್ಷಮಿಸಲ್ಪಟ್ಟ ಪಾಪಿಗಳು, ಅಂದರೆ ರಕ್ಷಿಸಲ್ಪಟ್ಟ ಪಾಪಿಗಳು ಆಗಿರುತ್ತೇವೆ. ನೀನು ಕ್ಷಮಿಸಲ್ಪಟ್ಟ ಪಾಪಿಯಾಗಿರುವಿಯೋ ಇಲ್ಲವೇ ಕ್ಷಮಿಸಲ್ಪಡದ ಪಾಪಿಯಾಗಿರುವಿಯೋ? ನೀನು ಕ್ಷಮಿಸಲ್ಪಡದವನಾಗಿದ್ದರೆ, ನಿನ್ನ ಅಂತಿಮ ಸ್ಥಿತಿಯು ಯಾವುದು, ಮತ್ತು ನೀನು ರಕ್ಷಿಸಲ್ಪಟ್ಟಿದ್ದರೆ ನಿನ್ನ ಅಂತಿಮ ಸ್ಥಿತಿಯು ಯಾವುದು?

ಎಡಗಡೆಯಲ್ಲಿರುವವರಿಗೆ ಯೇಸುವು ಏನು ಹೇಳುವನು? [ಓದಿರಿ ಮತ್ತಾಯ 25:41.] *ಯಾವುದರೊಳಗೆ* ಹೋಗಬೇಕೆಂದು ಆತನು ಹೇಳುವನು? [ಖಾಲಿಯಾದ ಸ್ಥಳದಲ್ಲಿ "ನಿತ್ಯವಾದ ಬೆಂಕಿ" ಎಂದು ತುಂಬಿರಿ.] ಬೆಂಕಿಯು ಎಷ್ಟುಕಾಲ ಇರುವುದು? ಬೆಂಕಿಯು ಎಂದಿಗೂ ನಂದಿಸಲ್ಪಡುವದಿಲ್ಲ (ಮಾರ್ಕ 9:48). ಬೆಂಕಿಯೂ ಎಂದಿಗೂ ಆರಿಸಲ್ಪಡದಿದ್ದರೆ, ಶಿಕ್ಷೆಯು ಎಂದೆಂದಿಗೂ ಮುಂದುವರಿಯತಕ್ಕದ್ದು. ದಂಡನೆಯು ಮುಂದುವರಿಯದಿದ್ದರೆ, ಬೆಂಕಿಯು ಮಂದುವರಿಯುವುದೋ? ಬೆಂಕಿಯೂ ದಂಡನೆಯೂ ಎರಡೂ "ನಿತ್ಯವಾದವುಗಳಾಗಿವೆ" (ಮತ್ತಾಯ 25:41, 46).

ದಂಡಿಸಲ್ಪಟ್ಟವರ "ನಿತ್ಯವಾದ ಬೆಂಕಿಗೆ" ವಿರುದ್ಧವಾಗಿ ಮತ್ತು "ನಿತ್ಯವಾಗಿ ದಂಡನೆಗೆ" ವಿರುದ್ಧವಾಗಿ ರಕ್ಷಿಸಲ್ಪಟ್ಟವರು ಏನನ್ನು ಹೊಂದುವರು? [ಓದಿರಿ ಮತ್ತಾಯ 25:46.] ಬಲಗಡೆಯಲ್ಲಿ ಇರುವವರು *ಏನನ್ನು* ಸ್ವೀಕರಿಸುವರು ಎಂದು ಯೇಸುವು ಹೇಳುತ್ತಾನೆ? [ಖಾಲಿಯಾದ ಸ್ಥಳದಲ್ಲಿ "ನಿತ್ಯಜೀವ" ಎಂದು ತುಂಬಿರಿ.] ನೀತಿವಂತರಿಗೆ *ಜೀವವು* ನಿತ್ಯವಾದದ್ದು ಸದಾಕಾಲ ಇರುವಂಥದ್ದು ಆಗಿರುವಂತೆ, *ಬೆಂಕಿಯು* ಅನೀತಿವಂತರಾಗಿರುವುದು. ನಿನಗೆ ನಿತ್ಯವಾದ ಬೆಂಕಿ ಬೇಕೋ ಇಲ್ಲವೇ ನಿತ್ಯ ಜೀವಬೇಕೋ?

ನಿತ್ಯವಾದ ಬೆಂಕಿಯಲ್ಲಿ ದುಷ್ಟರು ಏನನ್ನು ಮಾಡುತ್ತಿರುವರು? [ಓದಿರಿ ಪ್ರಕಟನೆ 14:11.] ಅವರ ಯಾತನೆಯ ಹೊಗೆಯು ಎಂದೆಂದಿಗೂ ಎಂದೆಂದಿಗೂ ಮೇಲೇರುತ್ತಲೇ ಇರುವುದು, ಮತ್ತು ಅವರಿಗೆ *ಯಾತನೆಯಿಂದ ಏನು ಇರುವದಿಲ್ಲ.* [ಖಾಲಿಯಾದ ಸ್ಥಳದಲ್ಲಿ "ವಿಶ್ರಾಂತಿಯಿರುವದಿಲ್ಲ" ಎಂದು ತುಂಬಿರಿ.] ಯಾತನೆಯು ಸತತವಾಗಿ ಇರುವುದು. ಬೆಂಕಿಯಲ್ಲಿರುವವರಿಗೆ ಬೆಂಕಿಯ ಪರಿಣಾಮಗಳಿಂದ ವಿಶ್ರಾಂತಿ ಇರುವದಿಲ್ಲ. ಅದು *ಅಕ್ಷರಶಃವಾಗಿ* ಬೆಂಕಿಯೋ? ಇದೊಂದು ಮಹತ್ವದ ಪ್ರಶ್ನೆಯಾಗಿರುವುದು. ಆದರೆ ನಿಶ್ಚಯವಾಗಿ ಇದಕ್ಕೆ ನಾವು ಉತ್ತರವನ್ನು ತಿಳಿಯದಿರಬಹುದು. ಹೀಗಿದ್ದರೂ, ಬೆಂಕಿಯೂ ಅಕ್ಷರಶಃವಾದ ಬೆಂಕಿಯಾಗಿರದಿದ್ದರೆ, "ಬೆಂಕಿ" ಎಂಬ ಪದದ ಉಪಯೋಗವು, ಕೊನೆಯ ಪಕ್ಷ, ಯಾತನೆಯು ನಾವು ಬೆಂಕಿಯಲ್ಲಿರುವಷ್ಟೇ ಕಠಿಣವಾದದ್ದಾಗಿರುವುದೆಂದು ಅರ್ಥಮಾಡಿಕೊಳ್ಳಲಿಕ್ಕೆ ನಮಗೆ ಸಹಾಯ ಮಾಡುವುದು.

ಕ್ಷಮಿಸಲ್ಪಡುವವರ ಶಿಕ್ಷೆಗೆ ವಿರುದ್ಧವಾಗಿ, ರಕ್ಷಣೆ ಹೊಂದಿದವರು ಏನು ಮಾಡುತ್ತಿರುವರು? [ಓದಿರಿ ಪ್ರಕಟನೆ 14:13.] ಅವರು ಮಾಡಲು *ಏನನ್ನು* ಹೊಂದಿಕೊಳ್ಳುವರು? [ಖಾಲಿಯಾದ ಸ್ಥಳದಲ್ಲಿ "ವಿಶ್ರಾಂತಿ" ಎಂದು ತುಂಬಿರಿ.] ವಿಶ್ರಾಂತಿ ಪಡೆಯುವವರು "ಕರ್ತನಲ್ಲಿ" ಇರುವವರು ಎಂಬುದನ್ನು ಗಮನಿಸಿರಿ. ಕರ್ತನಲ್ಲಿ ಇರುವವರು ಯಾರು? "ರಕ್ಷಣೆಯ" ಪ್ರಶ್ನಾವಳಿಯಿಂದ ಕರ್ತನೊಳಗೆ, ಯೇಸುವಿನಲ್ಲಿ, ಬಾಪ್ತಿಸ್ಮ ಹೊಂದುವದರಿಂದ ಪಡಕೊಳ್ಳುವೆವೆಂದು ಕಲಿತುಕೊಂಡಿದ್ದೇವೆ (ರೋಮಾಪುರ 6:3; ಗಲಾತ್ಯ 3:27). [*ಹಿಂಬದಿಯಲ್ಲಿ* ಕ್ರಿಸ್ತನಲ್ಲಿ ಪ್ರವೇಶಿಸುವದು ಹೇಗೆ ಎಂಬುದನ್ನು ಉದಾಹರಿಸಿರಿ ಮತ್ತು ಚರ್ಚಿಸಿರಿ. ರಕ್ಷಿಸಲ್ಪಟ್ಟವರ ಅಂತಿಮ ಸ್ಥಿತಿಯಾಗಿರುವ ಪರಲೋಕಕ್ಕೂ ಮತ್ತು ತಪ್ಪಿಹೋದವರ ಅಂತಿಮಸ್ಥಿತಿಯಾಗಿರುವ ನರಕಕ್ಕೂ ಇರುವ ವ್ಯತ್ಯಾಸವನ್ನು ನೋಡಿರಿ. ಪುಟ 206ನ್ನು ನೋಡಿರಿ.]

ಕ್ಷಮಿಸಲ್ಪಡದ ಪಾಪಿಗಳು ತಮ್ಮ ದಂಡನೆಯಿಂದ ವಿಶ್ರಾಂತಿ ಪಡೆದುಕೊಳ್ಳ ಲಾರರು. ಅವರು ಹೇಗೆ ಪ್ರತಿಕ್ರಿಯೆ ತೋರಿಸುವರೆಂದು ಯೇಸು ಹೇಳುತ್ತಾನೆ? [ಓದಿರಿ ಮತ್ತಾಯ 25:30.] ಅವರು *ಹೇಗೆ* ಪ್ರತಿಕ್ರಿಯೆ ತೋರಿಸುವರು? [ಖಾಲಿಯಾದ ಸ್ಥಳದಲ್ಲಿ "ಗೋಳಾಡುವರು, ಕಟಕಟನೆ ಹಲ್ಲು ಕಡಿಯುವರು" ಎಂದು ತುಂಬಿರಿ.] ನನ್ನ ಒಬ್ಬ ಸ್ನೇಹಿತನು ತಾನು ನೋಡಿದ ಒಂದು ಟ್ರಕ್ ಅಪಘಾತದ ಬಗ್ಗೆ ಹೇಳಿದನು. ಟ್ರಕ್ಕಿಗೆ ಬೆಂಕಿಹತ್ತಿ ಸಿಡಿಯುತ್ತಿದ್ದಾಗಲೇ ಅವನು ಅಲ್ಲಿಗೆ ತಲುಪಿದನು. ಒಳಗೆ ಸಿಕ್ಕಿಕೊಂಡಿದ್ದ ವಾಹನ ಚಾಲಕನು ಬೆಂಕಿಯ ಬಾಧೆಯಿಂದ ತಪ್ಪಿಸಿಕೊಳ್ಳಲು ಬಾಗಿಲನ್ನು ತೆರೆಯಲು, ನೋವಿನಿಂದ ತನ್ನ ಹಲ್ಲುಗಳನ್ನು ಕಡಿಯುತ್ತ ಅವಸರದ ಪ್ರಯತ್ನ ಮಾಡುತ್ತಿರುವದನ್ನು ಅವನು ನೋಡಿದನು. ನಿತ್ಯಬೆಂಕಿಯಿಂದ ದಂಡಿಸಲ್ಪಟ್ಟವರು ಗೋಳಾಡುತ್ತಿರುವರು ಮತ್ತು ನೋವಿನಿಂದ ತಮ್ಮ ಹಲ್ಲುಗಳನ್ನು ಕಡಿಯುತ್ತಿರುವರು.

ಇದಕ್ಕೆ ವಿರುದ್ಧವಾಗಿ, ರಕ್ಷಿಸಲ್ಪಟ್ಟವರು, ಈ ಜೀವನದಲ್ಲಿ ಕಷ್ಟಕರವಾದ ಸಮಯಗ ಳನ್ನು ದಾಟಿಹೋಗಿದ್ದರೂ, ಬರಲಿಕ್ಕಿದ್ದ ಜೀವನದಲ್ಲಿ ಒಂದು ಭಿನ್ನವಾದ ಅನುಭವವನ್ನು ಹೊಂದಿಕೊಳ್ಳುವರು. ಅವರ ಜೀವಿತವು ಹೇಗಿರುವುದು? [ಓದಿರಿ ಪ್ರಕಟನೆ 21:4.] ಅವರು ಪುನಃ ಎಂದಿಗೂ *ಏನನ್ನು* ಅನುಭವಿಸುವದಿಲ್ಲ? [ಖಾಲಿಯಾದ ಸ್ಥಳದಲ್ಲಿ "ಇನ್ನು ದುಃಖವಾಗಲಿ ಗೋಳಾಟವಾಗಲಿ ಇರುವದಿಲ್ಲ" ಎಂದು ತುಂಬಿರಿ.] ಹಿಂದಿನ ಎಲ್ಲಾ ದುಃಖಕರವಾದ ಭಾವನೆಗಳು ಅಂತ್ಯಗೊಳ್ಳುವವು. ಅವರಿಗೆ ಇನ್ನು ದುಃಖವಿರುವದಿಲ್ಲ ಮತ್ತು ಎಂದಿಗೂ ಪುನಃ ಗೋಳಾಡುವದಿಲ್ಲ.

ಕ್ಷಮಿಸಲ್ಪಡದ ಪಾಪಿಗೆ ಅವನ ಶಿಕ್ಷೆಯಲ್ಲಿ ಸಂತೋಷವಿರುವದಿಲ್ಲ. ಅದರ ಬದಲು ಅವನಿಗೆ ಏನು ಇರುವುದು? [ಓದಿರಿ ರೋಮಾಪುರ 2:9.] ಅವನಿಗೆ *ಏನು* ಇರುವುದು? [ಖಾಲಿಯಾದ ಸ್ಥಳದಲ್ಲಿ "ಕಷ್ಟವೂ ಸಂಕಟವೂ" ಎಂದು ತುಂಬಿರಿ.] ಈ ಎರಡು ಪದಗಳು ಪಾಪಿಗೆ ಬಾಹ್ಯ ನೋವು ಅಷ್ಟೇ ಅಲ್ಲ ಆದರೆ ಆಂತರಿಕ ತೀಕ್ಷ್ಣವಾದ ವೇದನೆಯಿರುವುದು ಎಂಬುದನ್ನು ಸೂಚಿಸುತ್ತವೆ.

ಅಂಥ ಭಯಾನಕ ಆದರಣೆಯಿಲ್ಲದೇ ಇರುವದರ ಬದಲು ರಕ್ಷಿಸಲ್ಪಟ್ಟ ಪಾಪಿಯು ಆಶೀರ್ವದಿಸಲ್ಪಡುವನು. ತಮ್ಮ ಬಹುಮಾನಕ್ಕೆ ರಕ್ಷಿಸಲ್ಪಟ್ಟವರ ಪ್ರತಿಕ್ರಿಯೆ ಯಾವುದು? [ಓದಿರಿ ಮತ್ತಾಯ 25:23.] ಅವರು *ಏನನ್ನು* ಪ್ರವೇಶಿಸುವರು? [ಖಾಲಿಯಾದ ಸ್ಥಳದಲ್ಲಿ "ಸೌಭಾಗ್ಯ" ಎಂದು ತುಂಬಿರಿ.] ನೀತಿವಂತರ ಬಹುಮಾನವು ಯಾವುದೇ ನೋವು, ದುಃಖವಿರದ ಸೌಭಾಗ್ಯವಿರುವುದು.

ಯೇಸುವು ಪರಲೋಕದಲ್ಲಿ ತಂದೆಯೊಂದಿಗಿರಲು ಪಾಪದ, ದುಃಖದ ಮತ್ತು ಮರಣದ ಈ ಲೋಕವನ್ನು ಬಿಟ್ಟು ಹೋದನು (ಯೋಹಾನ 20:17), ಅದು ನಿತ್ಯ

ವಾದ (2 ಕೊರಿಂಥ 4:18) ಪ್ರಾಪಂಚಿಕವಲ್ಲದ, ದೇವರ ಆತ್ಮಿಕ ವಾಸಸ್ಥಾನವಾಗಿರುವುದು. ಕ್ಷಮಿಸಲ್ಪಡದ ಪಾಪಿಯು ಯೇಸುವಿನೊಂದಿಗೆ ಇರಲು ಎಂದಾದರೂ ಹೋಗಬಹುದೋ? [ಓದಿರಿ ಯೋಹಾನ 8:21.] ಅವನು *ಏನನ್ನು* ಮಾಡಲು ಶಕ್ತನಾಗುವದಿಲ್ಲ? [ಖಾಲಿಯಾದ ಸ್ಥಳದಲ್ಲಿ "ಕ್ರಿಸ್ತನ ಬಳಿಗೆ ಹೋಗಲಾರನು" ಎಂದು ತುಂಬಿರಿ.]

ರಕ್ಷಿಸಲ್ಪಟ್ಟ ವ್ಯಕ್ತಿಗೆ ಇದು ಸತ್ಯವಾಗಿರುವುದೋ? [ಓದಿರಿ ಯೋಹಾನ 14:3.] ಅವನು *ಯಾರೊಂದಿಗೆ* ಇರುವನು? [ಖಾಲಿಯಾದ ಸ್ಥಳದಲ್ಲಿ "ಕ್ರಿಸ್ತನೊಂದಿಗೆ" ಎಂದೂ ತುಂಬಿರಿ.] ತನ್ನ ಪಾಪದಲ್ಲಿ ಸಾಯುವ ಒಬ್ಬನು ಯೇಸುವಿನೊಂದಿಗಿರಲು ಎಂದಿಗೂ ಹೋಗುವದಿಲ್ಲ ಎಂಬ ಸಂಗತಿಯು, ಅವನ ಪಾಪಗಳು ಕ್ಷಮಿಸಲ್ಪಟ್ಟಿದ್ದರೆ ಅವನು ಯೇಸುವಿನೊಂದಿಗೆ ಇರಬಹುದು ಎಂದು ಅರ್ಥಕೊಡುತ್ತದೆ. ಅಂಥ ಹೇಳಿಕೆಯು ರಕ್ಷಿಸಲ್ಪಟ್ಟಿರುವವರು ಯೇಸುವಿನೊಂದಿಗಿರಲು ಹೋಗುವದಿಲ್ಲ ಎಂದಿದ್ದರೆ, ಅರ್ಥವಿಲ್ಲದ್ದಾಗುತ್ತದೆ ಯಾಕಂದರೆ ಅವರು, ಯೇಸುವಿನ ನಿತ್ಯವಾದ ಮನೆಯಿಂದ, ನಿತ್ಯವಾದ ಭೂಲೋಕದ ವಾಸಸ್ಥಳಕ್ಕೆ ಮಿತಿಗೊಂಡವರಾಗಿರುತ್ತಾರೆ. ರಕ್ಷಿಸಲ್ಪಟ್ಟವರು ಯೇಸುವಿನೊಂದಿಗಿರಲು ಹೋಗುವರು [ಯೋಹಾನ 12:26].

ದುಷ್ಟರ ನಿತ್ಯವಾದ ವಾಸಸ್ಥಾನವು ಯಾವುದಾಗಿರುವುದು? [ಓದಿರಿ ಮತ್ತಾಯ 10:28.] ಅವರು *ಎಲ್ಲಿ* ಇರುವರು? [ಖಾಲಿಯಾದ ಸ್ಥಳದಲ್ಲಿ "ನರಕ" ಎಂದು ತುಂಬಿರಿ.] "ನಾಶಮಾಡು" ಎಂಬ ಪದವು ಇಲ್ಲಿ, ಕೆಲವರು ಬೋಧಿಸುವಂತೆ *ನಿರ್ಮೂಲ ಮಾಡುವ* ಅರ್ಥಕೊಡುವದಿಲ್ಲ ಆದರೆ ಮತ್ತಾಯ 9:17ರಲ್ಲಿ ಅದೇ ಗ್ರೀಕ ಪದದಿಂದ ಸೂಚಿಸಲ್ಪಟ್ಟಂತೆ, *ರಚನೆಯನ್ನು ಹಾಳುಮಾಡುವುದು* ಎಂದರ್ಥ ಕೊಡುವುದು. ದ್ರಾಕ್ಷರಸದ ಬುದ್ದಲಿಗಳು ನಾಶವಾಗುವವು ಅಂದರೆ ಹಾಳಾಗುವವು. ನರಕವು ನಶ್ವರ ವಾಗಿ ಹೋಗುವ ಸ್ಥಳವಲ್ಲ, ಆದರೆ ಅದರ ಬದಲು ಅದು ನಿತ್ಯವಾದ ಹಾಳಾಗುವಿಕೆಯ, ಅಲ್ಲಿ ಹೋಗುವವರ ನಿತ್ಯವಾದ ನಾಶನದ ಸ್ಥಳವಾಗಿರುವುದು (2 ಥೆಸಲೊನೀಕ 1:9). ನಿತ್ಯವಾದ ದಂಡನೆಯು ಕ್ಷಮಿಸಲ್ಪಡದ ಪಾಪಿಯ ಅಂತಿಮ ಸ್ಥಿತಿಯಾಗಿರುವುದು.

ನರಕದಲ್ಲಿ ಇರುವದರ ಬದಲು, ರಕ್ಷಿಸಲ್ಪಟ್ಟವರು ನಿತ್ಯವಾಗಿ ಎಲ್ಲಿ ವಾಸಿಸುವರು? [ಓದಿರಿ 1 ಪೇತ್ರ 1:3, 4.] ರಕ್ಷಿಸಲ್ಪಟ್ಟವರಿಗೆ *ಯಾವುದು* ಕಾದಿರಿಸಲ್ಪಟ್ಟಿದೆ? [ಖಾಲಿಯಾದ ಸ್ಥಳದಲ್ಲಿ "ಪರಲೋಕ" ಎಂದು ತುಂಬಿರಿ.] ರಕ್ಷಿಸಲ್ಪಟ್ಟ ಎಲ್ಲರೂ ಪರಲೋಕದಲ್ಲಿ ಯೇಸುವಿನೊಂದಿಗೆ ಇರುವರು.

ಪಾಪಿಯ ದಂಡನೆಯ ಕಡೆಗೆ ಇನ್ನೊಮ್ಮೆ ನೋಡಿರಿ. ಅವನು ಯೇಸುವಿನೊಂದಿಗೆ ಇರಲಾರನು, ಆದರೆ ಅದರ ಬದಲು ಅವನು ನರಕದಲ್ಲಿರುವನು, ಅಲ್ಲಿ ಶ್ರಮೆಯೂ ಸಂಕಟವೂ ಇರುವುದು, ನಿತ್ಯವಾದ ಬೆಂಕಿಯ ಕಾರಣದಿಂದ ಗೋಳಾಡುವದರಿಂದಲೂ ಹಲ್ಲು ಕಡಿಯುವುದರಿಂದಲೂ ಅವನಿಗೆ ವಿಶ್ರಾಂತಿ ಇರುವದಿಲ್ಲ.

ಈ ಅಂತಿಮ ಸ್ಥಿತಿಗೆ ವಿರುದ್ಧವಾಗಿ, ರಕ್ಷಿಸಲ್ಪಟ್ಟವರನ್ನು ಗಮನಿಸಿರಿ. ರಕ್ಷಿಸಲ್ಪಟ್ಟ ವ್ಯಕ್ತಿಯು ಯೇಸುವಿನೊಂದಿಗೆ ಪರಲೋಕದಲ್ಲಿರುವನು. ಅಲ್ಲಿ ದುಃಖ ಇಲ್ಲವೇ ಗೋಳಾಟವಿಲ್ಲದೇ ಸಂತೋಷವಿರುವುದು. ಅವನು ತನ್ನ ಎಲ್ಲಾ ಕೆಲಸಗಳಿಂದ ವಿಶ್ರಾಂತಿ ಪಡೆಯುವನು ಮತ್ತು ದೇವರೊಂದಿಗೆ ನಿತ್ಯಜೀವವನ್ನು ಆನಂದಿಸುವನು.

ಈ ಭಾಗದಲ್ಲಿ ನಾವು ಏನನ್ನು ಕಲಿತುಕೊಂಡಿದ್ದೇವೆ? ರಕ್ಷಿಸಲ್ಪಟ್ಟವರ ಮತ್ತು ಪಾಪಿಗಳ ಅಂತಿಮ ಸ್ಥಿತಿಯು ಸಂಪೂರ್ಣವಾಗಿ ಭಿನ್ನವಾಗಿರುವುದು ಎಂಬುದನ್ನು ಕಲಿತುಕೊಂಡಿದ್ದೇವೆ. ರಕ್ಷಿಸಲ್ಪಟ್ಟವನು ಪರಲೋಕದ ಆನಂದವನ್ನು ಸದಾಕಾಲ ಅನುಭವಿಸುವನು ಮತ್ತು ಪಾಪಿಯು ನಿತ್ಯವಾದ ಬೆಂಕಿಯಿಂದ ಸೃಷ್ಟಿಸಲ್ಪಟ್ಟ ಹಿಂಸೆಯ ಯಾತನೆಯನ್ನು ಶ್ರಮೆಯನ್ನು ಅನುಭವಿಸುವನು.

## IV. ಅಂತಿಮ ಸ್ಥಿತಿಯನ್ನು ಯಾವುದು ನಿರ್ಧರಿಸುವುದು?

ನಮ್ಮ ಅಂತಿಮ ಸ್ಥಿತಿಯನ್ನು ನಿರ್ಧರಿಸಲು ನಾವು ಸಹಾಯ ಮಾಡಬಹುದೋ? ಯಾರು ದಂಡಿಸಲ್ಪಡುವರು? [ಓದಿರಿ ರೋಮಾಪುರ 2:8.] *ಯಾರು* ದಂಡಿಸಲ್ಪಡುವರು? [ಖಾಲಿಯಾದ ಸ್ಥಳದಲ್ಲಿ "ಸತ್ಯಕ್ಕೆ ವಿಧೇಯರಾಗದವರು" ಎಂದು ತುಂಬಿರಿ.] ಇದು ಬೈಬಲಿನ ಸ್ಥಿರವಾದ ಬೋಧನೆಯಾಗಿರುವುದೋ? [ಓದಿರಿ 2 ಥೆಸಲೋನೀಕ 1:8.] *ಯಾರು* ದಂಡಿಸಲ್ಪಡುವರು? [ಖಾಲಿಯಾದ ಸ್ಥಳದಲ್ಲಿ "ಸುವಾರ್ತೆಗೆ ವಿಧೇಯರಾಗದವರು" ಎಂದು ತುಂಬಿರಿ.]

ಇವರು ದಂಡಿಸಲ್ಪಟ್ಟರೆ, ಯಾರು ಬಹುಮಾನಿಸಲ್ಪಡುವರು ಎಂದು ನೀನು ಯೋಚಿಸುವಿ? [ಓದಿರಿ ಮತ್ತಾಯ 7:21.] ರಾಜ್ಯವನ್ನು *ಯಾರು* ಪ್ರವೇಶಿಸುವರು? [ಖಾಲಿಯಾದ ಸ್ಥಳದಲ್ಲಿ "ತಂದೆಯ ಚಿತ್ತವನ್ನು ಮಾಡುವವರು" ಎಂದು ತುಂಬಿರಿ.] ಯೇಸುವು *ಯಾರನ್ನು* ಆಶೀರ್ವಾದಿಸುವನು? [ಓದಿರಿ ಇಬ್ರಿಯ 5:9.] ಯೇಸುವು *ಯಾರಿಗೆ* ನಿತ್ಯವಾದ ರಕ್ಷಣೆಯನ್ನು ಕೊಡುವನು? [ಖಾಲಿಯಾದ ಸ್ಥಳದಲ್ಲಿ "ಆತನಿಗೆ ವಿಧೇಯರಾಗುವವರಿಗೆ" ಎಂದು ತುಂಬಿರಿ.]

ಈ ಭಾಗದಲ್ಲಿ ನಾವು ಏನನ್ನು ಕಲಿತು ಕೊಂಡಿದ್ದೇವೆ? ಯೇಸುವಿನ ಮುಖಾಂತರ ಬಂದ ಸತ್ಯಕ್ಕೆ ನಾವು *ವಿಧೇಯರಾಗದಿದ್ದರೆ* [ಯೋಹಾನ 1:17.] ನಿತ್ಯವಾಗಿ ನಾವು ದಂಡಿಸಲ್ಪಡುತ್ತೇವೆ, ಆದರೆ ನಾವು ಆತನಿಗೆ ವಿಧೇಯರಾದರೆ ನಾವು ನಿತ್ಯವಾದ ರಕ್ಷಣೆಯನ್ನು ಹೊಂದುವೆವು ಎಂಬುದನ್ನು ಕಲಿತು ಕೊಂಡಿದ್ದೇವೆ.

**ಸಾರಾಂಶ**

ಇದು ಒಂದು ಮಹತ್ವದ ಪಾಠವಾಗಿರುವುದು, ಯಾಕಂದರೆ ಆನಂದಕರವಾದ ನಿತ್ಯವಾದ ಅಂತಿಮ ಸ್ಥಿತಿ ಇರಬೇಕಾದರೆ ನಾವು ಏನು ಮಾಡಬಹುದು ಎಂಬುದನ್ನು ಅಧ್ಯಯನ ಮಾಡಿದ್ದೇವೆ.

I. *ಪಾಪವು ಏನಾಗಿದೆ?* ಯಾವುದು ಸರಿಯಾಗಿರುವುದು ಎಂಬುದರ ಬಗ್ಗೆ ಸಂಶಯವಿರುವದನ್ನು ಮಾಡುವುದು, ಧರ್ಮ ಶಾಸ್ತ್ರದ ಉಲ್ಲಂಘನೆ, ಎಲ್ಲಾ ಅನೀತಿ ಮತ್ತು ನಾವು ಮಾಡಬೇಕೆಂದು ತಿಳಿದಿರುವ ಒಳ್ಳೆಯದನ್ನು ಮಾಡದೇ ಇರುವುದು ಪಾಪವಾಗಿದೆ.

II. *ನೀನು ಪಾಪಿಯಾಗಿರುವಿಯೋ?* ಹೌದು, ನಾವೆಲ್ಲರೂ ಪಾಪಿಗಳಾಗಿದ್ದೇವೆ.

III. *ಪಾಪಿಯ ಮತ್ತು ರಕ್ಷಿಸಲ್ಪಟ್ಟವನ ಅಂತಿಮ ಸ್ಥಿತಿ ಯಾವುದು?* ಯೇಸುವಿನ ಮತ್ತು ದೇವರ ಸನ್ನಿಧಿಯಿಲ್ಲದೇ, ಪಾಪಿಯು ನರಕದಲ್ಲಿ ದಂಡನೆಯನ್ನು ಅನುಭವಿಸುವನು. ರಕ್ಷಿಸಲ್ಪಟ್ಟ ವ್ಯಕ್ತಿಯು ಯೇಸುವಿನ ಮತ್ತು ದೇವರ ಸನ್ನಿಧಿಯಲ್ಲಿ ಪರಲೋಕದಲ್ಲಿ ಸದಾಕಾಲವೂ ಆನಂದಿಸುವನು.

IV. *ನೀನು ಏನನ್ನು ಮಾಡುವಿಯೋ, ಮಾಡುವದಿಲ್ಲವೋ?* ಎಂಬುದರ ಮೇಲೆ ನಿಮ್ಮ ಅಂತಿಮ ಸ್ಥಿತಿಯು ತೀರ್ಮಾನಿಸಲ್ಪಡುವುದು. ಯೇಸುವು ನಮಗೆ ತಂದ ಸತ್ಯಕ್ಕೆ ನೀವು ವಿಧೇಯರಾಗುವಿರೋ ಇಲ್ಲವೋ ಎಂಬುದರ ಮೇಲೆ ನಿಮ್ಮ ಅಂತಿಮ ಸ್ಥಿತಿಯು ತೀರ್ಮಾನಿಸಲ್ಪಡುವುದು.

ಯೇಸುವಿನೊಂದಿಗೆ ಪರಲೋಕದಲ್ಲಿ ಪ್ರವೇಶಿಸುವಿಯೋ? ನೀನು ರಕ್ಷಿಸಲ್ಪಟ್ಟಿರುವಿಯೋ? ನೀನು ರಕ್ಷಿಸಲ್ಪಟ್ಟಿರದಿದ್ದರೆ, ನೀನು ರಕ್ಷಿಸಲ್ಪಡಲು ನೀನು ಏನು ಮಾಡುವ ಅಗತ್ಯತೆಯಿರುವುದು? ಈಗ ನೀನು ಕರ್ತನಿಗೆ ವಿಧೇಯನಾಗಿ, ಆತನಿಗಾಗಿ

ಯಾಕೆ ಜೀವಿಸಬಾರದು? ನೀನು ಆತನಿಗೆ ವಿಧೇಯನಾದರೆ ನೀನು ಎಲ್ಲವನ್ನು ಪಡೆದುಕೊಳ್ಳುವಿ. ಆದರೆ ಬೆಲೆಯುಳ್ಳ ಯಾವುದನ್ನೂ ನೀನು ಕಳೆದು ಕೊಳ್ಳುವದಿಲ್ಲ. ಈಗಲೇ ಯಾಕೆ ವಿಧೇಯನಾಗಬಾರದು? ಯೇಸುವಿಗೆ ವಿಧೇಯನಾಗಲು ಎಂದಾದರೂ ಯೋಚಿಸಿದರೆ, ವಿಧೇಯನಾಗಲು ಈಗಲೇ ಅತ್ಯುತ್ತಮವಾದ ಸಮಯವಿರುವುದು. ನೀನು ವಿಧೇಯನಾದ ನಂತರ, ನಿತ್ಯತ್ವದಲ್ಲೆಲ್ಲಾ ನೀನು ಆತನೊಂದಿಗೆ ಇರಲಿಕ್ಕಾಗುವಂತೆ, ಜೀವಿಸಲು, ಆತ್ಮನ ಮುಖಾಂತರ ಯೇಸುವು ನಿನ್ನೊಂದಿಗಿರುವನು ಮತ್ತು ನಿನಗೆ ಸಹಾಯ ಮಾಡುವನು (ಎಫೆಸ 3:16) ಎಂಬ ಭರವಸೆ ನಿನಗಿರುವುದು. ಈಗ ಯೇಸುವಿನೊಂದಿಗಿನ ಅನುದಿನದ ಅನ್ಯೋನ್ಯತೆಯ ಆನಂದವನ್ನು ಮತ್ತು ಈ ಜೀವನ ಮುಗಿದ ತರುವಾಯ ಆತನೊಂದಿಗಿನ ನಿತ್ಯವಾದ ಸಂತೋಷಗಳನ್ನು ನೀನು ಬಯಸುವದಿಲ್ಲವೋ? ಯಾವ ತೀರ್ಮಾನವನ್ನು ನೀನು ಮಾಡಬೇಕೆಂದು ಯೇಸುವು ಬಯಸುವನು? ಬಾಪ್ತಿಸ್ಮದಲ್ಲಿ ಯೇಸುವಿನೊಂದಿಗೆ ಹೂಣಲ್ಪಡಲು ಈಗಲೇ ಹೋಗಲು ನೀನು ಸಿದ್ಧನಾಗಿರುವಿಯೋ?

© 2009 Truth for Today